# ನೀಲಿ ನಾಯೀ ಕಣ್ಣು

 

ಸ್ಪಾನಿಷ್: ಗಾಬ್ರಿಯೇಲ್ ಗಾರ್ಸಿಯಾ ಮಾರ್ಕ್ವೆಜ್
ಕನ್ನಡಕ್ಕೆ : ಓ.ಎಲ್. ನಾಗಭೂಷಣ ಸ್ವಾಮಿ
ಕಲೆ: ವಿಶ್ವನಾಥ್ ಎ.ಎಸ್.

ಆಮೇಲೆ, ನನ್ನ ಕಡೆ ನೋಡಿದಳು. ನನ್ನನ್ನ ಇದೇ ಮೊದಲ ಸಲ ನೋಡುತ್ತಿದ್ದಾಳೆ ಅಂದುಕೊಂಡೆ. ದೀಪದ ಹಿಂದೆ ಇದ್ದವಳು ನನ್ನ ಕಡೆ ತಿರುಗಿ, ಅವಳ ಜಾರಿಕೆಯ ಜಿಡ್ಡು ನೋಟ ನನ್ನ ಬೆನ್ನ ಮೇಲೆ, ಭುಜದ ಮೇಲೆ ನನಗೇ ಫೀಲ್ ಆಗುತ್ತಿರುವಾಗ, ಅವಳನ್ನ ನಾನೇ ಮೊದಲ ಸಲ ನೋಡ್ತಾ ಇದ್ದೇನೆ ಅಂತ ಗೊತ್ತಾಯಿತು. ಸಿಗರೇಟು ಹಚ್ಚಿದೆ. ಹಿಂದಿನ ಒಂದು ಕಾಲಿನ ಮೇಲೆ ಬ್ಯಾಲೆನ್ಸು ಮಾಡುತ್ತ ಕುರ್ಚಿಯನ್ನು ತಿರುಗಿಸುವ ಮೊದಲು ಸಿಗರೇಟಿನ ಘಾಟು ಹೊಗೆಯನ್ನು ಒಂದು ದಮ್ಮು ಒಳಕ್ಕೆಳಕೊಂಡೆ. ಆಮೇಲೆ ಅವಳನ್ನ ನೋಡಿದೆ- ಪ್ರತೀ ರಾತ್ರಿ ದೀಪದ ಪಕ್ಕ ನಿಂತು ನನ್ನ ಕಡೆ ನೋಡುತ್ತಾ ಇದ್ದಳು ಅನ್ನುವ ಥರಾ. ಎರಡು ಮೂರು ನಿಮಿಷ ನಾವು ಮಾಡಿದ್ದು ಅಷ್ಟೇ-ಅವಳನ್ನು ನಾನು ನನ್ನನ್ನು ಅವಳು ನೋಡಿದೆವು. ನಾನು ಕುರ್ಚಿಯ ಹಿಂಗಾಲಿನ ಮೇಲೆ ಬ್ಯಾಲೆನ್ಸು ಮಾಡುತ್ತಾ ನೋಡಿದೆ, ಅವಳು ಉದ್ದವಾದ ಕೈಯನ್ನ ದೀಪದ ಮೇಲೆ ಅಲ್ಲಾಡಿಸದೆ ಇಟ್ಟುಕೊಂಡು ನನ್ನ ಕಡೆ ನೋಡುತ್ತಾ ಇದ್ದಳು. ಪ್ರತಿ ರಾತ್ರಿಯೂ ಕಾಣುತಿದ್ದ ಹಾಗೆ ಅವಳ ರೆಪ್ಪೆ ಹೊಳೆಯುವುದು ಕಂಡೆ. 'ನೀಲಿ ನಾಯೀ ಕಣ್ಣು' ಅಂದೆ. ಆಗ ನೆನಪಾಯಿತು, ನಾನು ಮಾಮೂಲಾಗಿ ಅವಳಿಗೆ ಹೇಳುತ್ತಿದ್ದ ಮಾತು ಅದು: 'ನೀಲಿ ನಾಯೀ ಕಣ್ಣು.'

ಅವಳು ದೀಪದ ಮೇಲಿಂದ ಕೈ ತೆಗೆಯದೆ, 'ಅದೇ. ಯಾವತ್ತೂ ಅದನ್ನ ನಾವು ಮರೆಯಲ್ಲ, ಎಲ್ಲಾ ಕಡೆ ನೀಲಿ ನಾಯೀ ಕಣ್ಣು ಅಂತ ಬರೆದಿದ್ದೇನೆ' ಅಂದು ನಿಟ್ಟುಸಿರು ಬಿಡುತ್ತಾ ನನ್ನ ನೋಟದ ಕಕ್ಷೆಯನ್ನು ತೊರೆದಳು. ಅವಳು ಡ್ರೆಸಿಂಗ್ ಟೇಬಲ್ ಹತ್ತಿರ ಹೋಗಿದ್ದು ನೋಡಿದೆ. ಗಣಿತ ಸೂತ್ರಕ್ಕೆ ತಕ್ಕ ಹಾಗೆ ಹಿಂದೆ ಮುಂದೆ ತುಯ್ದಾಡುವ ಬೆಳಕಿನ ತುದಿಯಲ್ಲಿದ್ದ ಕನ್ನಡಿಯಲ್ಲಿ ಈಗ ನನ್ನನ್ನ ನೋಡುತ್ತಿರುವ ಹಾಗೆ ಕಂಡಳು. ಪಿಂಕು ಬಣ್ಣದ ಕಪ್ಪೆಯ ಚಿಪ್ಪಿನ ಮುಚ್ಚಳದ ಪುಟ್ಟ ಡಬ್ಬಿಯನ್ನು ತೆರೆಯುವಾಗ ಅವಳ ಕಲ್ಲಿದ್ದಲು ಕೆಂಡದ ಕಣ್ಣು ನನ್ನ ನೋಡುತ್ತಲೇ ಇದೆ ಅಂತ ಗಮನಿಸಿದೆ. ಮೂಗಿನ ತುದಿಗೆ ಸ್ವಲ್ಪ ಪೌಡರು ಹಾಕಿಕೊಂಡಳು ಪೌಡರ್ ಕೆಲಸ ಮುಗಿಸಿ, ಡಬ್ಬಿ ಮುಚ್ಚಿ ಎದ್ದಳು. ಮತ್ತೆ ದೀಪದ ಹತ್ತಿರ ಹೋಗುತ್ತಾ 'ಯಾರೋ ಕನಸಿನಲ್ಲಿ ಈ ರೂಮು ನೋಡುತ್ತಾ ನನ್ನ ಗುಟ್ಟು ಬಯಲು ಮಾಡುತ್ತಾ ಇದ್ದಾರೆ ಅನಿಸತ್ತೆ' ಅಂದಳು. ಕನ್ನಡಿಯ ಮುಂದೆ ಕೂರುವ ಮೊದಲು ಆಗಲೇ ಮಾಡಿದ್ದ ಹಾಗೇ ನಡುಗುವ ಉದ್ದ ಕೈಯನ್ನು ದೀಪದ ಉರಿಯ ಮೇಲೆ ಚಾಚಿ ಬೆಚ್ಚಗೆ ಮಾಡಿಕೊಳ್ಳುತ್ತಾ, 'ನಿನಗೆ ಚಳಿ ಆಗಲ್ಲ' ಅಂದಳು. 'ಒಂದೊಂದು ಸಲ ಆಗತ್ತೆ' ಅಂದೆ. 'ಈಗ ಆಗುತ್ತಿರಬೇಕು' ಅಂದಳು. ಆಗ ನನಗೆ ಸೀಟಿನ ಮೇಲೆ ಒಬ್ಬನೇ ಯಾಕೆ ಇರಕ್ಕಾಗ್ತಿರಲಿಲ್ಲ ಅನ್ನೋದು ಅರ್ಥ ಆಯ್ತು. ನಾನು ನಿಜವಾಗಲೂ ಒಂಟಿ ಅಂತ ನಿಜವೆಂದು